ಹೋಗು ಎಂದು ಹೇಳಿರಬೇಕಾದರೆ, ನಾನು ಹೇಳುವುದು ಸುಳ್ಳು ಇದ್ದರೆ ಕೇಳಿ, ಜೈಲಿಗೆ ಹೋಗಿದ್ದೆರೋ ಇಲ್ಲವೋ ಕೇಳಿ, ಬಂದ ತಕ್ಷಣ ಈ ಘಟನೆ ನಡೆದಿದೆ. ಇದು ನ್ಯಾಯಾಂಗ ತನಿಖೆಯಾಗಬೇಕು ಅದಕ್ಕೆ ದಯವಿಟ್ಟು ಒಪ್ಪಿಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆ ಎ.ಎಸ್.ಐ.ಯನ್ನು ಸಸ್ಪೆಂಡ್ ಮಾಡಿದ್ದಿರೊ, ಮಾಡುತ್ತೀರೊ?

ಶ್ರೀ ಆರ್.ರೋಷನ್ ಬೇಗ್:- ಅವರನ್ನು ಸಸ್ಪೆಂಡ್ ಮಾಡುತ್ತೇನೆ.

(ಇ) ಹೇಮಾವತಿ ಜಲಾಶಯ ಯೋಜನೆಯಿಂದ, ಸಕಾಲದಲ್ಲಿ ನೀರು ಬಿಡದೆ ರೈತರ ಬೆಳೆಗಳಿಗೆ ತೊಂದರೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಸನ್ಮಾನ್ಯ ಉಪಾಧ್ಯಕ್ಷರೆ, ಹೇಮಾವತಿ ಜಲಾಶಯ ಯೋಜನೆಯಿಂದ ಆ ಯೋಜನೆಯ ಕಾಲುವೆಗಳಿಗೆ ಸಕಾಲದಲ್ಲಿ ನೀರನ್ನು ಬಿಡದೆ ರೈತರ ಬೆಳೆಗಳಿಗೆ ಅಥವಾ ರೈತರು ಬೆಳೆಗಳನ್ನು ಬೆಳೆಯಲಿಕ್ಕೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ನಾನು ಅನುಮತಿಯನ್ನು ಕೇಳಿದ್ದೆ, ತಾವು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕಾಗಿ ತಮ್ಮನ್ನು ನಾನು ಅಭಿನಂದಿಸುತ್ತಾ, ಈಗ ನೀರಾವರಿ ಸಲಹಾ ಸಮಿತಿಯು ಸಭೆ ಸೇರಿ, ಈ ತಿಂಗಳು 10ನೇ ತಾರೀಖು ಹೇಮಾವತಿ ಜಲಾಶಯ ಯೋಜನೆಯ ಕಾಲುವೆಯೊಳಗೆ ನೀರು ಬಿಡಬೇಕು ಎಂದು ಹೇಳಿ ನಿರ್ಣಯ ಮಾಡಿತ್ತು. ಆ ಸಂದರ್ಭದಲ್ಲಿ ಬಹಳ ಲೇಟಾಯಿತು ಎಂದು ಕಲಾಪ ಚರ್ಚೆ ಮಾಡಿದೆವು. ಏಕೆಂದರೆ ನೀರನ್ನು ಬಿಡುವುದು ಲೇಟಾಯಿತು ಅಂದರೆ, ಬೆಳೆಯನ್ನು ಇಡುವುದೂ ಕೂಡ ಲೇಟಾಗುತ್ತದೆ, ಬೆಳೆ ಇಡುವುದು ಲೇಟಾದರೆ ಇಳುವರಿಯ ಮೇಲೆ ಬಹಳ ಕೆಟ್ಟ ಪರಿಣಾಮವಾಗಿ ಇಳುವರಿ ಕಡಿಮೆಯಾಗುತ್ತದೆ. ಈಗ ನೀರಾವರಿ ಸಲಹಾ ಸಮಿತಿಯು 10ನೇ ತಾರೀಖು ನೀರನ್ನು ಬಿಡಬೇಕೆಂದು ನಿರ್ಣಯವನ್ನು ಕೈಗೊಂಡರೂ, ಇಲಾಖಾ ಅಧಿಕಾರಿಗಳು ನೀರನ್ನು ಬಿಡಲಿಲ್ಲ. ರೈತರುಗಳು ನನ್ನ ಹತ್ತಿರ ಬಂದು ಮನವಿಯನ್ನು ಮಾಡಿದಮೇಲೆ, ನಾನು ಸಂಬಂಧಪಟ್ಟ (ಇಂಜಿನಿಯರ್) ಅವರನ್ನು ಸಂಪರ್ಕಿಸಿದೆ. ಅವರು ಹೇಳಿದರು ಜಲಾಶಯದಲ್ಲೇ ನೀರಿಲ್ಲ ನೀರನ್ನು ಎಲ್ಲಿ ಬಿಡುವುದು ಎಂದು. ಮಂತ್ರಿಗಳು ಇಲ್ಲ ನೀರು ಸಾಕಷ್ಟು ಇದೆ, ನಮ್ಮ ರೈತರ ಬೆಳೆಗಳಿಗೆ ತೊಂದರೆ ಆಗುವುದಿಲ್ಲ ಎಂದು ಹೇಳಿದರು. ಪಾಪ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ ಎಂದು ಹೇಳಿ ಈ ಸರ್ಕಾರ ಅಧಿಕಾರಕ್ಕೆ ಬಂತು.. ನೀರಾವರಿಯ ಬಗ್ಗೆ ನಿಮ್ಮ ಆಶ್ವಾಸನೆಗಳು ಏನು ಇದ್ದಾವೆ ಅದು ನೀರಿನ ಮೇಲಿನ ಗುಳ್ಳೆಗಳಾದಾವು ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಲ್ಲ. ಈಗ ಹೇಮಾವತಿ ಬಲ ಮೇಲ್ದಂಡೆಗೂ ಕೂಡ ಇವೊತ್ತಿಗೂ ಕೂಡ ನೀರನ್ನು ಬಿಟ್ಟಿಲ್ಲ. ನಿನ್ನೆ ತಾನೆ ನಾವು ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿ ಗೊತ್ತಾದಮೇಲೆ, ಇಲ್ಲಿಂದ ಸಚಿವರು ಸಂಪರ್ಕಿಸಿದ ಮೇಲೆ ನಿನ್ನೆಯಿಂದ ನೀರನ್ನು ಬಿಟ್ಟಿದ್ದಾರೆ ಎಂದು ನನಗೆ ಗೊತ್ತಾಗಿದೆ. ಈಗ ಹೇಮಾವತಿ ಬಲ ಮೇಲ್ದಂಡೆ ನಾಲೆಯಿಂದ ನೀರನ್ನು ಬಿಟ್ಟಿಲ್ಲ. ಯಾವಾಗ

ನೀರನ್ನು ಬಿಡುತ್ತೀರಿ? ರೈತರಿಗೆ ಅನುಕೂಲವನ್ನು ಯಾವಾಗ ಕಲ್ಪಿಸಿಕೊಡುತ್ತೀರಿ ಎಂಬುವುದನ್ನು ತಿಳಿಸಬೇಕು ಎಂದು ಹೇಳಿ ನಾನು ತಮ್ಮ ಮೂಲಕ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತಾ ಇದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಎತ್ತಿರತಕ್ಕಂಥ ವಿಚಾರದಲ್ಲಿ ಸೂಕ್ಷ್ಮವಾಗಿ ಹೇಳುವುದಾದರೆ, 16.07.96ರಂದು ನಮ್ಮ ಎಡದಂಡೆ ನಾಲೆಗೆ 850 ಕ್ಯೂಸೆಕ್ಸ್ ನೀರನ್ನು ಬಿಡಲಾಗಿದೆ. ಆದ್ದರಿಂದ ಅವರು ಹೇಳಿದಂತೆ ಸ್ವಲ್ಪ ಕಾಮಗಾರಿಯ ಅಂತ್ಯದ ಸಮಯದಲ್ಲಿ ಕೆಲಸವಿದ್ದುದರಿಂದ, 10ನೇ ತಾರೀಖಿನಂದು ಮಾಡಬೇಕಾದ ಕೆಲಸವನ್ನು 16ನೇ ತಾರೀಖಿಗೆ ಹಾಕಿಕೊಂಡಿದ್ದಾರೆ. 850 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿರುವುದರಿಂದ ಈ ಸಮಸ್ಯೆ ಬಗೆಹರಿದಿದೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎ.ಟಿ.ರಾಮಸ್ವಾಮಿ:- ಮಾನ್ಯ ಮಂತ್ರಿಗಳು ನೀರನ್ನು ಬಿಟ್ಟಿದ್ದೇವೆ ಎಂದು ಹೇಳಿದರು. ಆದರೆ ಹೇಮಾವತಿ ಬಲ ಮೇಲ್ದಂಡೆಗೆ ಏಕೆ ನೀರು ಬಿಟ್ಟಲ್ಲ? ಏನು ತೊಂದರೆ ಇದೆ? ನೀವೇ ಈ ಸದನದಲ್ಲಿ ಹೇಳಿದಿರಿ, ರೈತರ ಬೆಳೆಗಳಿಗೆ ನಮ್ಮಲ್ಲಿ ನೀರು ಲಭ್ಯ ಇದೆ ಎಂದು...

ಶ್ರೀ ಕೆ.ಎನ್.ನಾಗೇಗೌಡ:- ತಮ್ಮ ಮುಖಾಂತರ ರಾಮಸ್ವಾಮಿಯವರಿಗೆ ತಿಳಿಸುವಂತದ್ದು, 16ನೇ ತಾರೀಖಿನಿಂದ ಬಲದಂಡೆ ನಾಲೆಗೆ ಸಹ 150 ಕ್ಯೂಸೆಕ್ಸ್‌ನಂತೆ....

ಶ್ರೀ ಎ.ಟಿ.ರಾಮಸ್ವಾಮಿ:- ಬಲ ಮೇಲ್ದಂಡೆ ನಾಲೆ...

ಶ್ರೀ ಕೆ.ಎನ್.ನಾಗೇಗೌಡ:- ಆ ಬಲ ಮೇಲ್ದಂಡೆ ನಾಲೆದು ಹೆಡ್ ಸಿಕ್ಕಿಲ್ಲ ಎಂದು ಇನ್ನೂ ಮಾಡಿಲ್ಲ ಬಹುಶಃ ಬೇಗನೆ ಮಾಡಿಸಿಕೊಡುತ್ತೇನೆ.

(ಈ) ಕೊಡಗಿನಲ್ಲಿ ಆಂದೋಲನ ಪತ್ರಿಕೆಯಲ್ಲಿ ಕೊಡಗಿನ ನಾಗರೀಕರಿಗೆ ಒಂದು ಸಂತೋಷದ ಸುದ್ದಿ ಎಂದು ಒಂದು ಜಾಹಿರಾತನ್ನು ಕೊಟ್ಟಿರುವುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರ ಪೇಟೆ):- ಸನ್ಮಾನ್ಯ ಉಪಾಧ್ಯಕ್ಷರೆ, ಕೊಡಗಿನಲ್ಲಿ 'ಆಂದೋಲನ' ಪತ್ರಿಕೆಯಲ್ಲಿ ಕೊಡಗಿನ ನಾಗರೀಕರಿಗೆ ಒಂದು ಸಂತೋಷದ ಸುದ್ದಿ ಎಂದು ಹೇಳಿ ಒಂದು ಜಾಹಿರಾತನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ಮಾನ್ಯತೆ ಪಡೆದ ರಿಜಿಸ್ಟರ್ ನಂ.424, 1991ರಲ್ಲಿ ರಿಜಿಸ್ಟರ್ ಆಗಿದೆ ಎಂದು ಕೊಟ್ಟಿದ್ದಾರೆ. ಚೆನ್ನಮ್ಮ ಹೆಚ್.ಡಿ.ದೇವೇಗೌಡ ಟಿ.ಸಿ.ಎಚ್. ಮತ್ತು ಮೊದಲನೇ ವರ್ಷದ ಪಿ.ಯು.ಸಿ.ಸೋಮವಾರ ಪೇಟೆಯಲ್ಲಿ ತೆರೆಯಲಾಗುವುದು ಎಂದು ಕೊಟ್ಟಿದ್ದಾರೆ. ಅದರ ಜೊತೆಗೆ ಮೈಸೂರು ವಿಳಾಸವನ್ನು ಸಹ ಕೊಟ್ಟಿದ್ದಾರೆ, ಕೊಡಗಿನ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ, ಮೈಸೂರಿನ ವಿಳಾಸ : ಚೆನ್ನಮ್ಮ ಎಚ್.ಡಿ.ದೇವೇಗೌಡ ಡಿ-ಫಾರ್ಮಸಿ ಕಾಲೇಜ್ ಮತ್ತು ನರ್ಸಿಂಗ್ ಸ್ಕೂಲ್ ಆಫ್ ಕಾಲೇಜ್, ಬಲ್ಲಾಳ ಸರ್ಕಲ್, ಮೈಸೂರು